28. ಮೈನ್ಟೇನೆನ್ಸ್ ಇಂಜಿನಿಯರಿಂಗ್
29. ಮಾಸ್ಟರ್ ಆಫ್ ಇಂಜಿನಿಯರಿಂಗ್ ಮ್ಯಾನೇಜ್ ಮೆಂಟ್
30. ಮೆಕಾನಿಕಲ್ ಇಂಜಿನಿಯರಿಂಗ್
31. ಮ್ಯಾನುಫ್ಯಾಕ್ಚರಿಂಗ್ ಸೈನ್ಸ್ ಅಂಡ್ ಇಂಜಿನಿಯರಿಂಗ್
32. ಪವರ್ ಎಲೆಕ್ಟ್ರಾನಿಕ್ಸ್
33. ಪವರ್ ಸಿಸ್ಟಂ ಇಂಜಿನಿಯರಿಂಗ್
34. ಪ್ರೊಡಕ್ಷನ್ ಇಂಜಿನಿಯರಿಂಗ್
35. ಪ್ರೊಡಕ್ಷನ್ ಇಂಜಿನಿಯರಿಂಗ್ ಅಂಡ್ ಸಿಸ್ಟಂ ಟೆಕ್ನಾಲಜಿ
36. ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್
37. ಸಾಫ್ಟವೇರ್ ಇಂಜಿನಿಯರಿಂಗ್
38. ಸ್ಟ್ರಕ್ಚರಲ್ ಇಂಜಿನಿಯರಿಂಗ್
39. ಟೆಕ್ಸ್ ಟೈಲ್ ಟೆಕ್ನಾಲಜಿ
40. ಥರ್ಮಲ್ ಪವರ್ ಇಂಜಿನಿಯರಿಂಗ್
41. ವಾಟರ್ ರಿಸೋರ್ಸ್ ಮ್ಯಾನೇಜ್ ಮೆಂಟ್

ಬ) ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್

ಸಿ) ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್

ರಾಜ್ಯದಲ್ಲಿರುವ ರಾಜೀವ ಗಾಂಧಿ ಕಾಲೇಜುಗಳಲ್ಲಿ ಕನ್ನಡ ಪಠ್ಯ ವಿಷಯವಾಗಿ ಭೋದಿಸುವುದು

64 (588) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿವಿಧ ವೃತ್ತಿ ಶಿಕ್ಷಣದ ಕೋರ್ಸುಗಳ ವಿವರ ನೀಡುವುದು?

ಆ) ಈ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರತಕ್ಕ ಕಾಲೇಜುಗಳಲ್ಲಿ ಕನ್ನಡವನ್ನು ಪಠ್ಯ ವಿಷಯವಾಗಿ ಬೋಧಿಸಲು ನಿರ್ಧರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದರಿಂದ ಆಗತಕ್ಕೆ ಪ್ರಯೋಜನವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿವಿಧ ವೃತ್ತಿ ಶಿಕ್ಷಣದ ಕೋರ್ಸುಗಳ ಪಟ್ಟಿ ಲಗತ್ತಿಸಿದೆ.

ಅ) ವಿಶ್ವವಿದ್ಯಾಲಯದ ಪದವಿ ಕೋರ್ಸುಗಳಲ್ಲಿ ಕ್ರಿಯಾತ್ಮಕ ಕನ್ನಡ ಮತ್ತು ಕನ್ನಡ ಸಾಂಸ್ಕೃತಿಕ ಪಠ್ಯಗಳನ್ನು ಪಠ್ಯ ವಿಷಯವಾಗಿ ಅಳವಡಿಸಲು ದಿನಾಂಕ 7.5.2002 ರ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇ) ಕ್ರಿಯಾತ್ಮಕ ಕನ್ನಡ : ಪರರಾಜ್ಯದಿಂದ ಬಂದಿರುವ ಹಾಗೂ ಕನ್ನಡ ಬಾರದಿರುವ ವಿದ್ಯಾರ್ಥಿಗಳಿಗೆ ಈ ನಾಡಿನ ಜನರ ಜೊತೆ ಬೆರೆತು ಸಾಮಾಜೀಕರಣಗೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅನುಕೂಲವಾಗಬೇಕೆಂಬ ಉದ್ದೇಶದಿಂದ ಹಾಗೂ ಅವರ ದೈನಂದಿನ ವ್ಯವಹಾರದಲ್ಲಿ ಕನ್ನಡ ಬಳಸುವುದಕ್ಕೆ ಅನುಕೂಲವಾಗುವಂತೆ ಕನ್ನಡ ಕಲಿಕೆಯ ವಿಷಯವನ್ನು ಇಡಲಾಗುತ್ತಿದೆ. ಇದರಿಂದ ಪರರಾಜ್ಯದವರು ಕರ್ನಾಟಕದಲ್ಲಿ ಪರಕೀಯರಾಗುವುದನ್ನು ಸಹ ತಪ್ಪಿಸಬಹುದು.

ಈಗಾಗಲೇ ಕನ್ನಡವನ್ನು ಪಠ್ಯ ವಿಷಯವಾಗಿ ಅಭ್ಯಾಸ ಮಾಡಿ ವೃತ್ತಿ ಶಿಕ್ಷಣಕ್ಕೆ ಸೇರಿರುವ ಕರ್ನಾಟಕದ ವಿದ್ಯಾರ್ಥಿಗಳಿಗೆ ಅವರ ಸಾಂಸ್ಕೃತಿಕ ಪ್ರಜ್ಞೆಯ ವಿಸ್ತರಣೆಗಾಗಿ ಕಾಲೇಜುಗಳಲ್ಲಿ ಕನ್ನಡವನ್ನು ಪಠ್ಯ ವಿಷಯವಾಗಿ ಬೋಧಿಸಲು ನಿರ್ಧರಿಸಲಾಗಿದೆ.

ಈ) ಮಾಡಿಕೊಳ್ಳಲಾಗುತ್ತಿದೆ.

ಉ) 2002-2003ನೇ ಶೈಕ್ಷಣಿಕ ವರ್ಷದಿಂದ ಇದು ಜಾರಿಗೆ ಬರುತ್ತಿದೆ.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಡೆಸುತ್ತಿರುವ ವಿವಿಧ ವೃತ್ತಿ ಶಿಕ್ಷಣದ ಕೋರ್ಸುಗಳ ಪಟ್ಟಿ

ವೈದ್ಯಕೀಯ

1. ಎಂಬಿಬಿಎಸ್
2. ಎಂಡಿ
3. ಎಂಎಸ್
4. ಡಿಎಂ
5. ಎಂಸಿಹೆಚ್

ದಂತ

6. ಬಿಡಿಎಸ್
7. ಎಂಡಿಎಸ್

ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ ಅಂಡ್ ಹೋಮಿಯೋಪತಿ

8. ಬಿಎಎಂಎಸ್
9. ಎಂಡಿ (ಆಯುರ್ವೇದ)

10. ಬಿಹೆಚ್‌ಎಂಎಸ್

11. ಎಂಡಿ ಹೋಮಿಯೋಪತಿ

12. ಬಿಯುಎಂಎಸ್

ಫಾರ್ಮಸಿ

13. ಬಿ.ಫಾರ್ಮಾ

14. ಎಂ.ಫಾರ್ಮಾ

ನರ್ಸಿಂಗ್

15. ಬಿ.ಎಸ್ಸಿ (ನರ್ಸಿಂಗ್)

16. ಎಂ.ಎಸ್ಸಿ (ನರ್ಸಿಂಗ್)

ಪ್ಯಾರಾ ಮೆಡಿಕಲ್

17. ಬಿ.ಎಸ್ಸಿ ಫಿಸಿಯೋಥೆರಪಿ (ಬಿಪಿಟಿ)

18. ಎಂ.ಎಸ್ಸಿ ಫಿಸಿಯೋಥೆರಪಿ (ಎಂಪಿಟಿ)

19. ಬಿ.ಎಸ್ಸಿ ರೆನಾಲ್ ಡಯಾಲ್‌ಸಿಸ್ ಟೆಕ್ನಾಲಜಿ

20. ಬಿ.ಎಸ್ಸಿ ಎಂಎಲ್‌ಟಿ

21. ಬಿ.ಎಸ್ಸಿ ರೇಡಿಯೋಗ್ರಫಿ

22. ಬಿ.ಎಸ್ಸಿ ನ್ಯೂರೋಸೈನ್ಸ್ ಟೆಕ್ನಾಲಜಿ

23. ಬಿ.ಎಸ್ಸಿ ಫರ್‌ಫ್ಯೂಷನ್ ಟೆಕ್ನಾಲಜಿ

24. ಬಿ.ಎಸ್ಸಿ ಕಾರ್ಡಿಯಾಕ್ ಕೇರ್ ಟೆಕ್ನಾಲಜಿ

25. ಬಿ.ಎಸ್ಸಿ ರೆಸ್‌ಫಿರೇಟರಿ ಟೆಕ್ನಾಲಜಿ

26. ಬಿ.ಎಸ್ಸಿ ಆಪರೇಷನ್ ಥಿಯೇಟರ್ ಟೆಕ್ನಾಲಜಿ

27. ಎಂಎಸ್ಸಿ ಹಾಸ್ಪಿಟಲ್ ಆಡ್ಮಿನಿಸ್ಟ್ರೇಷನ್

28. ಎಂ.ಎಸ್ಸಿ ಪಿ.ಎಸ್.ಆರ್.

ಬೈಲಹೊಂಗಲ್ ತಾಲ್ಲೂಕಿನಲ್ಲಿ ಗ್ರಂಥಾಲಯಗಳ ಸ್ಥಾಪನೆ ಬಗ್ಗೆ

65 (77) - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಾಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?